ಓಎಸ್ 83/2022

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 25.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ**

ನಾನು 10ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾವ ಆಸ್ತಿಯು ಗುಂಡ್ಲುಪೇಟೆ ಪಟ್ಟಣದ 4ನೇ ವಿಭಾಗದ 18ನೇ ವಾರ್ಡ್ ನಲ್ಲಿ ಇದೆ ಎಂದರೆ ಸರಿ. ಸದರಿ 18ನೇ ವಾರ್ಡ್ ನ್ನು ಕುರುಬಗೇರಿ ಎಂದು ಕರೆಯುತ್ತಾರೆ ಮತ್ತು ಅದು ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ದಾವ ಆಸ್ತಿಯ ವಿಸ್ತೀರ್ಣ ಮೀಟರ್ ನಲ್ಲಿ ಇದೆ ಎಂದರೆ ಸರಿ. ದಾವ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 8.70 x ಉತ್ತರ ದಕ್ಷಿಣ 7.10 ಮೀಟರ್ ಇರುತ್ತದೆ ಎಂದರೆ ಸರಿ. ಹಾಗಾಗಿ ದಾವ ಆಸ್ತಿಯ ವಿಸ್ತೀರ್ಣ 61.77 ಚದರ್ ಮೀಟರ್ ಇದೆ ಎಂದರೆ ಸರಿ. ದಿನಾಂಕ 01.10.2023 ರ ಗುಂಡ್ಲುಪೇಟೆ ಉಪನೋಂದಣಿ ಕಛೇರಿ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿ ಮಾರುಕಟ್ಟೆ ಮೌಲ್ಯ ದರ ಪಟ್ಟಿಯ ಪ್ರಕಾರ ದಾವ ಆಸ್ತಿಯ ಬೆಲೆ ಚದರ್ ಮೀಟರ್ ಗೆ 18,183 ಇದೆ ಎಂದರೆ ಸರಿಯಲ್ಲ. ಹಾಗಾಗಿ ದಾವ ಆಸ್ತಿಯ ಮೌಲ್ಯ 11 ಲಕ್ಷದ 23 ಸಾವಿರದ 163 ರೂಪಾಯಿ (ರೂ. 11,23,0163/-) ಆಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ